

بسم اللهِ الرَّحمٰنِ الرَّحيم

# ಯು.ಕೆ.ಜಲ್ಸ 2022 ಅವಲೋಕನ ಮತ್ತು ಗಣ್ಯರ ಅಭಿಪ್ರಾಯಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-08-2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್‌ಹಮ್ದುಲಿಲ್ಲಾಹ್, ಅಲ್ಲಾಹನು ನಮಗೆ ಬ್ರಿಟನಿನ ಜಲ್ಸ ಸಾಲಾನ  ನಡೆಸಲು ಸೌಭಾಗ್ಯ ನೀಡಿದನು. ಮೂರು ದಿನಗಳಲ್ಲಿ ಅಲ್ಲಾಹನ ಅನುಗ್ರಹಗಳು ವರ್ಷಿಸಿದ್ದಾಗಿ ನಾವು ನೋಡಿದೆವು. ಜಲ್ಸಗಾಗಿ ವರ್ಷವಿಡೀ ಬಹಳವಾಗಿ ಕಾಯಲಾಗುತ್ತದೆ. ಅದರ ವ್ಯವಸ್ಥಾಪರಿಗೆ ಅದಕ್ಕಾಗಿ ಬಹಳ ಸಿದ್ಧತೆಗಳನ್ನು ಕೂಡ ನಡೆಸಬೇಕಾಗಿ ಬರುತ್ತದೆ. ಆದರೆ ಜಲ್ಸ ಆರಂಭವಾದರೆ ಈ ಮೂರು ದಿನಗಳು ಎಷ್ಟು ಬೇಗನೇ ಕಣ್ಣು ಮಿಟುಕಿಸುವುದರೊಳಗೆ ದಾಟಿ ಹೋಗುತ್ತದೆ ಎಂದು ಗೊತ್ತೇ ಆಗುವುದಿಲ್ಲ.

ಈ ವರ್ಷ ಜನರಿಗೂ ಮತ್ತು ನನಗೂ ಅನೇಕ ಕಾರಣದಿಂದ ಕೆಲವು ಆತಂಕಗಳಿದ್ದುವು. ಕೆಲವರು ಪತ್ರಗಳನ್ನು ಬರೆದು ತಮ್ಮ ಚಿಂತೆಗಳನ್ನು ವ್ಯಕ್ತಪಡಿಸಿಕೊಂಡಿದ್ದರು. ನಾನು ಮತ್ತು ಜಮಾಅತಿನ ಸದಸ್ಯರು ಸ್ವತಃ ದುಆಗಳನ್ನು ಮಾಡುತ್ತಿದ್ದೆವು. ಆದರೆ ಅಲ್ಲಾಹನು ಎಲ್ಲ ಆತಂಕಗಳನ್ನು ಮತ್ತು ಭಯಗಳನ್ನು ನೆಮ್ಮದಿಯನ್ನಾಗಿ ಬದಲಾಯಿಸಿದನು. ಹರಡಿರುವ ಕೋವಿಡ್ ಸಾಂಕ್ರಾಮಿಕ ರೋಗವು ಆತಂಕದ ಒಂದು ಕಾರಣವಾಗಿತ್ತು. ಹೇಗಿದ್ದರೂ ಅದರ ಪ್ರಭಾವ ಭಾಗವಹಿಸಿದ ಕೆಲವರ ಮೇಲೆ ಆಗಿರಬಹುದು. ಆದರೆ ಸಾಮಾನ್ಯವಾಗಿ ಅಲ್ಲಾಹನ ಬಹಳ ದೊಡ್ಡ ಕೃಪೆಯಿತ್ತು.

(ಜಲ್ಸ ಸಾಲಾನದ ನಂತರದ ಖುತ್ಬ ಎಂಬ ರೀತಿಯಲ್ಲಿ ಹುಝೂರ್ ಅನ್ವರ್ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಿದರು, ಭಾಗವಹಿಸಿದವರ ಅನಿಸಿಕೆಗಳು ಮತ್ತು ಅಲ್ಲಾಹನ ಅನುಗ್ರಹಗಳ ಕುರಿತು ಹೇಳಿದರು. ಹುಝೂರ್ ಹೇಳಿದರು:) ಜಲ್ಸದ ಸಿದ್ಧತೆಯಿಂದ ಮುಕ್ತಾಯದ ತನಕ ನಿಸ್ವಾರ್ಥರಾಗಿ ಕೆಲಸ ಮಾಡಿದ ಮತ್ತು ಈಗಲೂ ಯಾವುದಾದರೂ ರೀತಿಯಲ್ಲಿ ಮುಂದುವರೆಯುತ್ತಿರುವ ಮುಕ್ತಾಯದ ಕೆಲಸವನ್ನು ಮಾಡುತ್ತಿರುವ ಎಲ್ಲ ಕಾರ್ಯಕರ್ತರಿಗೆ ಮೊದಲು ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜಲ್ಸದ ವೇಳೆ ಬೇರೆ ಬೇರೆ ವಿಭಾಗಗಳಲ್ಲಿ ಮಹಿಳೆ ಮತ್ತು ಪುರುಷರಾದ ಸೇವಕರು ಸಾಮಾನ್ಯವಾಗಿ ತಮ್ಮ ಸಾಮರ್ಥ್ಯಕ್ಕೆ ಅನುಸಾರ ಉತ್ತಮ ಕೆಲಸಗಳನ್ನು ಮಾಡಿದರು. ಅದಕ್ಕಾಗಿ ಭಾಗವಹಿಸಿದ ಎಲ್ಲರೂ ಅವರಿಗೆ ಕೃತಜ್ಞರಾಗಿರಬೇಕು.

(ಕೆಲವು ಕಮ್ಮಿಗಳು ಮತ್ತು ಕೊರತೆಗಳು ಕಾಣಬಹುದಾಗಿತ್ತು. ಅದರ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಇಷ್ಟು ದೊಡ್ಡ ವ್ಯವಸ್ಥೆಯಲ್ಲಿ ಇಂತಹ ದೌರ್ಬಲ್ಯಗಳು ಆಗಿಬಿಡುತ್ತವೆ. ಆದರೆ ಸಂಘಟಕರು ಈ ದೌರ್ಬಲ್ಯಗಳು ಮತ್ತು ಕೊರತೆಗಳನ್ನು ದೂರ ಮಾಡಬೇಕು. ಉದಾಹರಣೆಗೆ ಲಜ್ನದ ಭೋಜನ ವಿಭಾಗದ ಬಗ್ಗೆ ಕೆಲವು ದೂರುಗಳು ಮತ್ತು ಬೇರೆ ಕೆಲವು ಸಂಗತಿಗಳು ಇವೆ. ಈ ಕುರಿತು ಜನರ ಪತ್ರಗಳು ಬಂದಿವೆ. ನಾನು ಆಗಾಗಲೇ ಅವುಗಳನ್ನು ಸಂಘಟಕರಿಗೆ ಕಳುಹಿಸುತ್ತಿದ್ದೇನೆ. ಇದರ ಪ್ರಕಾರ ಅವಲೋಕನ ನಡೆಸಿ ತಮ್ಮ ರೆಡ್‌ಬುಕ್‌ನಲ್ಲಿ ಈ ಕೊರತೆಗಳನ್ನು ಬರೆದು ಮುಂದಿನ ವರ್ಷ ಪ್ರತಿಯೊಂದು ವಿಭಾಗದಲ್ಲಿ ಉತ್ತಮ ವ್ಯವಸ್ಥೆ ಮಾಡಲು ಪ್ರಯತ್ನಿಸಬೇಕು.

ಎಂ.ಟಿ.ಎ. ಕೂಡ ಬಹಳ ಉತ್ತಮ ಪ್ರಸಾರ ನೀಡಿತ್ತು. ಈ ಬಾರಿ ಸ್ಟುಡಿಯೋ ಕೂಡ ಸಂಪೂರ್ಣವಾಗಿ ಅವರೇ ಸ್ವತಃ ತಯಾರು ಮಾಡಿದರು. ಇದರಿಂದ ಅನೇಕ ಸಾವಿರ ಪೌಂಡ್‌ಗಳ ಉಳಿತಾಯವಾಯಿತು. ಈ ವರ್ಷ ಅನೇಕ ಅಭಿವೃದ್ಧಿ ಹೊಂದಿದ ಮತ್ತು ಹೊಂದದ ದೇಶಗಳನ್ನು ಜಲ್ಸದ ಕಾರ್ಯಕ್ರಮದ ಸಂದರ್ಭದಲ್ಲಿ ಸೇರಿಸಲಾಗಿತ್ತು. ಇದರಿಂದ ಇಲ್ಲಿ ಕುಳಿತುಕೊಂಡ ಜನರು ಕೂಡ ಇತರ ದೇಶಗಳಲ್ಲಿ ನೆಲೆಸಿರುವ ತಮ್ಮ ಸಹೋದರರನ್ನು ನೋಡುತ್ತಿದ್ದರು. ಒಂದು ಒಗ್ಗಟ್ಟು ಇತ್ತು. ಅದರ ದೃಶ್ಯವನ್ನು ನಾವು ಎಂ.ಟಿ.ಎ.ದ ಕ್ಯಾಮೆರದ ಕಣ್ಣಿನ ಮೂಲಕ ನೋಡಿದೆವು. ಇದು ಅಲ್ಲಾಹನ ವಿಶಿಷ್ಟ ವರದಾನವಾಗಿದೆ. ಎಂ.ಟಿ.ಎ.ದ ಕಾರ್ಯಕರ್ತರು ಇದಕ್ಕಾಗಿ ಕೃತಜ್ಞತೆಗೆ ಅರ್ಹರಾಗಿರುವರು. ಅವರು ಅಹ್ಮದಿಯಾ ಜಮಾಅತಿನ ಐಕ್ಯವನ್ನು ಎಂ.ಟಿ.ಎ.ದ ಮೂಲಕ ಸಂಪೂರ್ಣ ಲೋಕಕ್ಕೆ ತೋರಿಸಿ ವಿರೋಧಿಗಳ ಬಾಯಿ ಮುಚ್ಚಿಸಿದರು.

(ಅನಂತರ ಹುಝೂರ್ ನಮ್ಮವರ, ಅನ್ಯರ, ನವ ಅಹ್ಮದಿಯರ ಮತ್ತು ಪತ್ರಕರ್ತರ ಅನೇಕ ಅನಿಸಿಕೆಗಳ ಬೆಳಕಿನಲ್ಲಿ ಅಲ್ಲಾಹನ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸುತ್ತಾ ಜಲ್ಸದ ಮೂಲಕ ಅಲ್ಲಾಹನು ಹೇಗೆ ಲೋಕದಲ್ಲಿ ಇಸ್ಲಾಮಿನ ಸಂದೇಶವನ್ನು ತಲುಪಿಸಿದನು ಎಂದು ಹೇಳಿದರು.)

(ಜನರಿಗೆ ಕಾಲಘಟ್ಟದ ಖಲೀಫರೊಂದಿಗೆ ಇರುವ ಪ್ರೀತಿ ಮತ್ತು ಪ್ರೇಮದ ಸಂಬಂಧದ ಕುರಿತು ಹುಝೂರ್ ಹೀಗೆ ಹೇಳಿದರು:) ನೈಜೀರಿಯದಲ್ಲಿ ಅಬೂಬಕರ್ ಸೀನಿ ಸಾಹಿಬ್ ಎಂಬ ಹೆಸರಿನ ಒಬ್ಬ ಅಹ್ಮದಿಯೇತರ ಪಂಡಿತ ಇದ್ದಾರೆ. ಅವರು ನಿಯಾಮೆ ಪಟ್ಟಣದಲ್ಲಿರುವ ಒಂದು ಮಸೀದಿಯ ಇಮಾಂ ಸಹ ಆಗಿರುವರು. ಅವರು ಹೀಗೆ ಹೇಳುತ್ತಾರೆ: ಜನರಿಗೆ ಖಲೀಫತುಲ್ ಮಸೀಹ್‌ರೊಂದಿಗೆ ಇರುವ ಪ್ರೀತಿ ಮತ್ತು ಪ್ರೇಮದ ಸಂಬಂಧ ಮತ್ತು ಯಾವ ರೀತಿಯಲ್ಲಿ ಜನರು ಖಲೀಫತುಲ್ ಮಸೀಹ್‌ರ ಒಂದು ಸೂಚನೆಗೆ ಪರಿಪೂರ್ಣ ಅನುಸರಣೆ ತೋರಿಸುತ್ತಿದ್ದರು ಹಾಗೂ ಭಾಷಣಗಳ ವೇಳೆ ಪರಿಪೂರ್ಣ ಮೌನವಾಗಿ ಇದ್ದರು ಎಂಬುದು ನನ್ನನ್ನು ಅತಿಯಾಗಿ ಪ್ರಭಾವಿತಗೊಳಿಸಿದೆ. ಈ ಪ್ರೇಮ ಸ್ವತಃ ಅಲ್ಲಾಹನು ಜನರ ಹೃದಯಗಳಲ್ಲಿ ಹಾಕಿರುವನು ಎಂದು ಅನಿಸುತ್ತಿತ್ತು. ಏಕೆಂದರೆ, ಅದರಲ್ಲಿ ತೋರಿಕೆಯ ಯಾವುದೇ ಅಂಶ ಇರಲಿಲ್ಲ.

ಬುರ್ಕಿನಾಫಾಸೋದ ಒಬ್ಬ ಅಹ್ಮದಿಯೇತರ ಸಹೋದರನಾದ ಇಸ್‌ಹಾಖ್ ಸಾಹಿಬ್ ಹೇಳುತ್ತಾರೆ: ನಿಮ್ಮ ಜಲ್ಸ ಸಾಲಾನ ಬಹಳ ವೈಭವಶಾಲಿಯಾಗಿತ್ತು. ಇದರ ಬೇರೆ ಉದಾಹರಣೆ ಸಿಗುವುದಿಲ್ಲ. ಇಷ್ಟು ಜನರು ಒಂದೆಡೆ ಒಟ್ಟು ಸೇರುವುದು ಮತ್ತು ಒಬ್ಬ ಇಮಾಮನ್ನು ಅನುಸರಿಸುವುದು ಪವಾಡಕ್ಕಿಂತ ಕಡಿಮೆಯೇನೂ ಅಲ್ಲ. ಈ ಜಲ್ಸ ಅತುಲ್ಯವಾಗಿದೆ. ಯಾರು ಒಪ್ಪಿದರೂ ಇಲ್ಲದಿದ್ದರೂ ಇಂದು ನೈಜ ಇಸ್ಲಾಂ ಅಹ್ಮದಿಯ್ಯತೇ ಆಗಿದೆ. ಈ ಸತ್ಯವನ್ನು ಜನರು ಅರಿಯುವ ಮತ್ತು ಅದರಲ್ಲಿ ಬಂದು ಸೇರುವ ದಿನ ದೂರವಲ್ಲ.

ಫ್ರಂಚ್ ಗಿಯಾನದಲ್ಲಿ ಒಂದು ಸಿರಿಯನ್ ಅಹ್ಮದಿಯೇತರ ವ್ಯಕ್ತಿಯಿರುವರು. ಅವರು ಮೊದಲ ಬಾರಿ ಜಲ್ಸ ನೋಡಿದರು. ಅರಬಿಗಳಿಗೆ ಮಸೀದಿಯಲ್ಲಿ ಎಂ.ಟಿ.ಎ. ಅಲ್‌ಅರಬಿಯದ ಮೂಲಕ ಕಾರ್ಯಕ್ರಮಗಳನ್ನು ನೋಡಲು ವ್ಯವಸ್ಥೆಯಿತ್ತು. ಅವರು ಹೇಳುತ್ತಾರೆ: ನಾನು ಮೊದಲ ಬಾರಿಗೆ ಜಮಾಅತಿನ ಸಂದೇಶವನ್ನು ಕೇಳುತ್ತಿದ್ದೇನೆ. ಮೊದಲ ಬಾರಿ ನಿಮ್ಮ ಖಲೀಫರ ಭಾಷಣವನ್ನು ಆಲಿಸುತ್ತಿದ್ದೇನೆ. ಈ ರೀತಿಯಾಗಿ ಇಸ್ಲಾಮಿನ ನೈಜ ಸಂದೇಶವನ್ನು ಲೋಕದಲ್ಲಿ ತಲುಪಿಸುವ ಮತ್ತು ಒಬ್ಬ ಖಲೀಫರ ಬೈಅತ್ ಮಾಡಿ ಲೋಕದೆಲ್ಲಡೆ ಕೆಲಸ ಮಾಡುವ ಒಂದು ಸಂಘಟನೆ ಮುಸ್ಲಿಮರಲ್ಲಿ ಇದೆ ಎಂಬುದರಿಂದ ನಾನು ಬಹಳ ಪ್ರಭಾವಿತಗೊಂಡಿದ್ದೇನೆ. ಈಗ ನಾನು – ಇನ್‌ಶಾಅಲ್ಲಾಹ್ ಖಂಡಿತ ನಿಮ್ಮ ಜಮಾಅತಿನ ಬಗ್ಗೆ ಕಲಿಯುವೆನು ಮತ್ತು ಹೆಚ್ಚಿನ ಸತ್ಯಶೋಧನೆ ನಡೆಸುವೆನು.

ಲೈಬೀರಿಯದ ಒಬ್ಬ ಮುಸ್ಲಿಮೇತರ ಅತಿಥಿ ಹೇಳುತ್ತಾರೆ: ನಾನು ಅಹ್ಮದಿಯ ಖಲೀಫರ ಭಾಷಣವನ್ನು ಆಲಿಸಿ ಬಹಳ ಪ್ರಭಾವಿತಗೊಂಡಿದ್ದೇನೆ... ಅಹ್ಮದಿಯಾ ಜಮಾಅತ್ ಬಹಳ ಸುಸಂಘಟಿತ ಜಮಾಅತ್ ಆಗಿದೆ ಎಂದು ನಾನು ಮೊದಲು ಕೇಳಿದ್ದೇನೆ. ಯಾವ ರೀತಿಯಲ್ಲಿ ಅಹ್ಮದಿಯಾ ಜಮಾಅತ್ ಒಬ್ಬ ನೇತಾರನ ಕೈಯಲ್ಲಿ ಒಟ್ಟಾಗಿ ಮತ್ತು ಲೋಕದಲ್ಲಿ ಶಾಂತಿ ಸ್ಥಾಪನೆಯ ಪ್ರಯತ್ನದಲ್ಲಿ ನಿರತವಾಗಿದೆ ಎಂದು ಇಂದು ನಾನು ಕಣ್ಣಾರೆ ಕಂಡೆನು.

(ಝೀಂಬಿಯದ ಒಬ್ಬ ಕ್ರೈಸ್ತ ಪಾದ್ರಿ ಜಲ್ಸದ ಕೊನೆಯ ದಿನ ಖಲೀಫತುಲ್ ಮಸೀಹ್‌ರ ಸಮಾರೋಪ ಭಾಷಣವನ್ನು ಆಲಿಸಿ ಬಹಳ ಪ್ರಭಾವಿತಗೊಂಡರು. ನಿಮ್ಮ ಖಲೀಫರ ಭಾಷಣ ಬಹಳ ಅದ್ಭುತಕರವಾಗಿತ್ತು ಎಂದು ಹೇಳಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿಕೊಂಡರು... ಅವರು ಹೇಳುತ್ತಾರೆ:) ಇಸ್ಲಾಂ ಮಹಿಳೆಯರ ಹಕ್ಕುಗಳನ್ನು ತಡೆದಿದೆ ಮತ್ತು ಸ್ತ್ರೀಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ ನೀಡಿಲ್ಲವೆಂದು ನಾನು ಭಾವಿಸಿದ್ದೆ. ಆದರೆ ಇಂದು ಈ ಭಾಷಣವನ್ನು ಆಲಿಸಿ ನನ್ನ ದೃಷ್ಟಿಕೋನ ಬದಲಾಗಿದೆ. ಇಸ್ಲಾಂ ಮಹಿಳೆಯರಿಗೆ ನೀಡಿರುವ ಹಕ್ಕುಗಳಷ್ಟು ಕ್ರೈಸ್ತ ಧರ್ಮ ನೀಡಿಲ್ಲವೆಂಬ ಸಂಗತಿಯನ್ನು ಹೇಳಲು ನಾನು ಕಿಂಚಿತ್ತೂ ಸಂಕೋಚಪಡುವುದಿಲ್ಲ.

ಜಮಾಅತಿನ ಬಗ್ಗೆ ಕಲಿಯುತ್ತಿರುವ ಐವರಿಕೋಸ್ಟಿನ ಒಬ್ಬ ಸಹೋದರ ಹೀಗೆ ಹೇಳಿದರು: ಅವರು ಮೊದಲ ಬಾರಿ ಈ ರೀತಿಯ ಜಲ್ಸವನ್ನು ಟಿ.ವಿ.ಯಲ್ಲಿ ನೇರವಾಗಿ ನೋಡಿದ್ದರು. ಜಲ್ಸದ ವ್ಯವಸ್ಥೆಯನ್ನು ನೋಡಿ ಬಹಳ ಪ್ರಭಾವಿತಗೊಂಡರು. ಇಷ್ಟು ಹೆಚ್ಚು ಜನರಿಗೆ ವ್ಯವಸ್ಥೆ ಮಾಡುವುದು ಮತ್ತು ಬಹಳ ಉತ್ತಮ ರೀತಿಯಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದು ಖಿಲಾಫತಿನ ತರಬೇತಿಯ ಆಳವಾದ ಪ್ರಭಾವ ಅಹ್ಮದಿಯರ ಮೇಲಿದೆ ಎಂಬುದನ್ನು ತಿಳಿಸುತ್ತದೆ. ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಜನರು ಹೇಗೆ ಬೈಅತ್ ಮಾಡುತ್ತಿದ್ದರು ಎಂಬುದು ಅವರಿಗೆ ಗೊತ್ತಿರಲಿಲ್ಲ. ಆದರೆ ಇಂದು ಖಲೀಫತುಲ್ ಮಸೀಹ್‌ರ ಕೈಯಲ್ಲಿ ಜನರು ಬೈಅತ್ ಮಾಡುವುದನ್ನು ನೋಡಿಕೊಂಡು ಉಂಟಾದ ಆಳವಾದ ಪ್ರಭಾವ ಮತ್ತು ಅವಸ್ಥೆ ವರ್ಣಿಸಲು ಸಾಧ್ಯವಲ್ಲ ಎಂದು ಅವರು ಹೇಳಿದರು.

ಜಲ್ಸದ ಮೂರು ದಿನಗಳಿಂದ ಪ್ರಯೋಜನ ಪಡೆದ ಕೇಮರೂನಿನ ಒಬ್ಬ ಅಹ್ಮದಿ ಮಹಿಳೆ ಜಲ್ಸ ಕೊನೆಗೊಂಡಾಗ ಜನರನ್ನು ಉಪದೇಶಿಸುತ್ತಾ ಹೀಗೆ ಹೇಳಿದರು: ನಮ್ಮ ಬಳಿ ಎಂ.ಟಿ.ಎ. ಇದೆ ಎಂಬುದು ನಮ್ಮ ಸೌಭಾಗ್ಯವಾಗಿದೆ. ಇದೊಂದು ಟಿ.ವಿ. ಚಾನೆಲ್ ಅಲ್ಲ. ಇದು ಜನರು ದಿನಾಲು ವಿದ್ಯೆ ಕಲಿಯುವ ಒಂದು ಶಾಲೆ ಮತ್ತು ಯೂನಿವರ್ಸಿಟಿಯಾಗಿದೆ. ನಾವು ಕೂಡ ಈ ಮೂರು ದಿನಗಳಲ್ಲಿ ಬಹಳ ಅರಿವು ಗಳಿಸಿದೆವು... ಪ್ರತಿಯೊಬ್ಬರು ಇದರಿಂದ ಪ್ರಯೋಜನ ಪಡೆಯಬೇಕು. ಇಸ್ಲಾಮಿನ ಬಗ್ಗೆ ಎಲ್ಲರ ಅರಿವು ವರ್ಧಿಸಲು ಇದನ್ನು ನಿಯತವಾಗಿ ಮನೆಗಳಲ್ಲಿ ನೋಡಬೇಕು ಮತ್ತು ಮಕ್ಕಳಿಗೂ ತೋರಿಸಬೇಕು. ನಮ್ಮ ವಿಶ್ವಾಸ ವರ್ಧಿಸಲು ವಿಶೇಷವಾಗಿ ಖಲೀಫತುಲ್ ಮಸೀಹ್‌ರ ಖುತ್ಬಗಳನ್ನು ಮತ್ತು ಭಾಷಣಗಳನ್ನು ಆಲಿಸಬೇಕು.

ಕಾಂಗೋಕನ್ಸಾಷಾದಿಂದ ಮತ್ತೊಂದು ಪ್ರತಿಕ್ರಿಯೆಯಿದೆ. ಅಲೀಬೋ ಜಮಾಅತಿನಲ್ಲಿ ಜಲ್ಸದ ಕಾರ್ಯಕ್ರಮವನ್ನು ತೋರಿಸಲಿಕ್ಕಾಗಿ ಹಂಬಲಿ ಮುಸ್ಲಿಮರ ಇಮಾಮನ್ನು ಆಮಂತ್ರಿಸಲಾಗಿತ್ತು. ಜಲ್ಸ ಕೊನೆಗೊಂಡಾಗ ಅವರು ಹೀಗೆ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ನಮಗೆ ನೀಡಿದ ನೈಜ ಇಸ್ಲಾಮಿನ ಪಾಠವನ್ನು ಅಹ್ಮದಿಯಾ ಜಮಾಅತ್ ಮುಂದಿರಿಸಿದ ರೀತಿಯು ನನ್ನ ಪ್ರಕಾರ ಅಹ್ಮದಿಯಾ ಜಮಾಅತಿನದ್ದೇ ವೈಶಿಷ್ಟ್ಯವಾಗಿದೆ. ಏನಾದರೂ ಮಾಡಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಲು ನಾನು ಕೂಡ ಬಯಸುತ್ತೇನೆ. ಅಲ್ಲಾಹನು ನನಗೆ ಅದರ ಸೌಭಾಗ್ಯ ನೀಡಲಿ ಎಂದು ಹೇಳಿದರು. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ.

ಅಹ್ಮದಿಯ್ಯತ್ತಿನ ಬಗ್ಗೆ ಕಲಿಯುತ್ತಿರುವ ಅಲ್‌ಬಾನಿಯದ ಒಬ್ಬ ಮುಸ್ಲಿಂ ಹುಡುಗಿ ಹೀಗೆ ಹೇಳಿದರು: ಜಲ್ಸ ಸಾಲಾನ ಯು.ಕೆ.ಯು ಒಂದು ವೈಭವಶಾಲಿ ಜಲ್ಸ ಆಗಿದೆ. ಅದರಲ್ಲಿ ಅಸಾಧಾರಣ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ನಾನು ಇಲ್ಲಿಯ ವರೆಗೂ ಜಮಾಅತಿನಲ್ಲಿ ಸೇರ್ಪಡೆಯಾಗಿಲ್ಲ. ಆದರೆ ಇದರ ಪ್ರಾಮುಖ್ಯ ಮತ್ತು ಸತ್ಯದ ಬಗ್ಗೆ ಗಂಭೀರವಾಗಿ ಆಲೋಚಿಸಲು ಈ ಜಲ್ಸ ನನಗೆ ಪ್ರೇರಣೆ ನೀಡಿದೆ.

ಆಸ್ಟ್ರೇಲಿಯದ ಒಬ್ಬ ನವ ಅಹ್ಮದಿ ಹೇಳುತ್ತಾರೆ: ಜಾಗತಿಕ ಬೈಅತ್ ನನಗೆ ಆಶ್ಚರ್ಯಕರವಾದ ಒಂದು ಅನುಭವವಾಗಿತ್ತು.

ಆ ಸಮಯದಲ್ಲಿ ನಾನು ಯಾವ ಆಧ್ಯಾತ್ಮಿಕ ಅವಸ್ಥೆಯಿಂದ ಸಾಗಿದನೋ ಅಂತಹ ಅವಸ್ಥೆ ಹಿಂದೆಂದೂ ನಾನು ಅನುಭವಿಸಿಲ್ಲ. ಅದು ನನಗೆ ಮನಶ್ಶಾಂತಿ ಮತ್ತು ನೆಮ್ಮದಿ ನೀಡಿದ ಒಂದು ಆಧ್ಯಾತ್ಮಿಕ ಸ್ಥಿತಿಯಾಗಿತ್ತು.

ಯಮನಿನ ಶೀಮ ಖಾಸಿಂ ಸಾಹಿಬ ಹೇಳುತ್ತಾರೆ: ನಾವು ಜಲ್ಸದ ಕಾರ್ಯಕ್ರಮಗಳನ್ನು ನೋಡಿದೆವು. ನಾವು ಸ್ವರ್ಗದಲ್ಲಿದ್ದೇವೆ ಮತ್ತು ಇಸ್ಲಾಮಿನ ಸೂರ್ಯ ನಮ್ಮ ಮೇಲೆ ಮತ್ತೊಮ್ಮೆ ಉದಯಿಸಿದೆ ಹಾಗೂ ನಮ್ಮ ಹೃದಯಗಳು ಮತ್ತು ಆತ್ಮಗಳಿಗೆ ತಾಜಾತನ ನೀಡಿದೆ ಎಂದು ಅನುಭವವಾಗುತ್ತಿತ್ತು. ನಮ್ಮಲ್ಲಿ ಯಥಾರ್ಥ ವಿಶ್ವಾಸ, ಪ್ರೇಮ, ಐಕ್ಯ ಮತ್ತು ನೈತಿಕತೆಯ ಆತ್ಮ ಊದಲ್ಪಟ್ಟಿದೆ, ನಾವು ನಿಮ್ಮಿಂದ ದೂರವಿದ್ದೆವು. ಆದರೆ ನಮ್ಮ ಹೃದಯಗಳು ನಿಮ್ಮ ಜೊತೆಗೆ ಇದ್ದುವು, ನಾವು ಒಂದೇ ಮನೆಯಲ್ಲಿ ಇದ್ದೆವು, ಒಬ್ಬ ಅಹ್ಮದಿಯಲ್ಲದೇ ಬೇರೆ ಯಾರೂ ಈ ಸಂಬಂಧವನ್ನು ಅನುಭವಿಸಲಾರ... ಕೃಪಾಳುವಾದ ಅಲ್ಲಾಹನು ಖಿಲಾಫತನ್ನು ಸದಾ ನೆಲೆನಿಲ್ಲಿಸಲಿ. ಇದಿಲ್ಲದೇ ನಮಗೆ ಯಾವುದೇ ಅಸ್ತಿತ್ವ ಮತ್ತು ಗುರಿಯಿಲ್ಲ.

ಕಬಾಬೀರಿನ ಒಬ್ಬ ಅರಬ್ ಮಹಿಳೆಯಾದ ದುಆ ಸಾಹಿಬ ಹೇಳುತ್ತಾರೆ: ನಾವು ನಿಜವಾಗಿಯೂ ಖಲೀಫರ ಜೊತೆಗೆ ಇದ್ದೇವೆ ಮತ್ತು ನಮ್ಮ ನಡುವೆ ಯಾವುದೇ ದೇಶ ಮತ್ತು ಯಾವುದೇ ಸಮುದ್ರವಿಲ್ಲವೆಂದು ಬೈಅತಿನ ಸಮಯದಲ್ಲಿ ನನಗೆ ಅನಿಸುತ್ತಿತ್ತು. ಇಂತಹ ಸಂತೋಷದ ಅನುಭವದಿಂದ ನನ್ನ ಹೃದಯ ಒಡೆದು ಹೋಗುವುದು ಎಂದು ಅನಿಸುತ್ತಿದೆ.

ಬಿ.ಬಿ.ಸಿ.ಯ ಜರ್ನಲಿಸ್ಟ್ ಆದ ಸೌತ್ ಎಡ್‌ವರ್ಡ್ ಸಾಲ್ಟ್ ಹೇಳುತ್ತಾರೆ: ನಾನು ಜಲ್ಸದಲ್ಲಿ ಬಹಳ ಉತ್ತಮವಾಗಿ ಸಮಯವನ್ನು ಕಳೆದೆ. ಅತಿಥಿ ಸತ್ಕಾರ ಬಹಳ ಉತ್ತಮವಾಗಿತ್ತು. ಬೇರೆ ಬೇರೆ ಭಾಷಣಗಳನ್ನು ಆಲಿಸಿಯೂ ಬಹಳ ಸಂತೋಷವಾಯಿತು. ಮುಂದೆಯೂ ನಿಮ್ಮೊಂದಿಗೆ ಕೆಲಸ ಮಾಡುತ್ತೇನೆ.

(ಖುತ್ಬದ ಕೊನೆಯಲ್ಲಿ ಹುಝೂರ್, ಕೆನಡದ ಸನ್ಮಾನ್ಯ ಖುದ್ರತುಲ್ಲಾಹ್ ಅದ್ನಾನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ನುಸ್ರತ್ ಖುದ್ರತ್ ಸುಲ್ತಾನ ಸಾಹಿಬ, ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಜಮಾಅತಿನ ಸೇವೆ ಮಾಡುವ ಸೌಭಾಗ್ಯ ಪಡೆದ ಸನ್ಮಾನ್ಯ ಚೌಧರಿ ಲತೀಫ್ ಅಹ್ಮದ್ ಝುಮಟ್ ಸಾಹಿಬ್ ಮತ್ತು ಮೀರ್‌ಪೂರ್ ಕಾಶ್ಮೀರದ ಸನ್ಮಾನ್ಯ ಮುಶ್ತಾಖ್ ಅಹ್ಮದ್ ಆಲಮ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು. ಜುಮಾ ನಮಾಝಿನ ನಂತರ ಅವರ ಜನಾಝ ಗಾಯಿಬ್ ನಿರ್ವಹಿಸುವುದಾಗಿಯೂ ಘೋಷಿಸಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, on 12-08-2022*

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim |***Layout***: U Basheer Ahmad

***Published By***: Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon